# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ಮು.ಅ./ಓ.ಎಫ್.ಸಿ/ಪಿಆರ್/ 20/2015-16.

ಮುಖ್ಯ ಅಭಿಯಂತರರ ಕಛೇರಿ
ಓ.ಎಫ್.ಸಿ ರವರ ಕಛೇರಿ,
3ನೇ ಮಹಡಿ, ಅನೆಕ್ಸ್ ಕಟ್ಟಡ,
ಎನ್.ಆರ್.ವೃತ್ತ, ಬೆಂಗಳೂರು-2.
ದಿನಾಂಕ: 04-06-2015

## ತಿಳುವಳಿಕೆ ಪತ್ರ

ರವರಿಗೆ,

M/s. Bharti Airtel Limited
Circle office, #55 Divya shree towers,
Bannerghatta main road
Bangalore.-560029.

ಮಾನ್ಯರೆ,

ವಿಷಯ:- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಯಲಹಂಕ ಉಪ ವಿಭಾಗದ ವ್ಯಾಪ್ತಿಯ, ಚೌಡೇಶ್ವರಿ ವಾರ್ಡ್ ನಂ-02 ರ ವ್ಯಾಪ್ತಿಯಲ್ಲಿ ಬರುವ ದೊಡ್ಡಬಳ್ಳಾಪುರ ರಸ್ತೆ ಕೆಂಚ್ಚನಹಳ್ಳಿ ಕ್ರಾಸ್ ಮುಖಾಂತರ ಹಾರೋಹಳ್ಳಿಗೆ ಹೆಚ್.ಡಿ.ಡಿ ಮುಖಾಂತರ ಓ.ಎಫ್ ಕೇಬಲ್‌ನ್ನು ಅಳವಡಿಸುತ್ತಿರುವ ದೂರಿನ ಬಗ್ಗೆ

ಉಲ್ಲೇಖ:-
1. ಈ ಕಛೇರಿಯ ಅನುಮತಿ ಪತ್ರ ಸಂಖ್ಯೆ: ಮು.ಅ/ಓ.ಎಫ್.ಸಿ/ಪಿಆರ್/1190/2013-14, ದಿನಾಂಕ: 15-04-2014.
2. ಈ ಕಛೇರಿಯ ಅನುಮತಿ ಪತ್ರ ಸಂಖ್ಯೆ: ಮು.ಅ/ಓ.ಎಫ್.ಸಿ/ಪಿಆರ್/1184/2013-14, ದಿನಾಂಕ: 04-03-2015.
3. ಜಂಟಿ ಆಯುಕ್ತರು ಯಲಹಂಕ ರವರ ಟಿಪ್ಪಣಿ ದಿನಾಂಕ: 28-05-2015.
4. ಸಹಾಯಕ ಕಾರ್ಯಪಾಲಕ ಅಭಿಯಂತರರು (ಯಲಹಂಕ) ಉಪವಿಭಾಗ ರವರ ಪತ್ರ ಸಂಖ್ಯೆ: ಸಕಾಅ/ಬೃಬೆಂಮಪಾ/ಯುವಿಬೆ/ಸಇ-2/2014-15/72, ದಿನಾಂಕ: 27-05-2015.

******

ಉಲ್ಲೇಖ (1)ರಲ್ಲಿ ತಮ್ಮ ಸಂಸ್ಥೆಗೆ ಈ ಕಛೇರಿಯಿಂದ ಓ.ಎಫ್.ಸಿ ಅಳವಡಿಕೆಗಾಗಿ ಅಗತ್ಯ ಶುಲ್ಕ ಪಾವತಿಸಿಕೊಂಡು ನಿಬಂಧನೆಗಳೊಂದಿಗೆ ಅನುಮತಿ ಪತ್ರವನ್ನು ನೀಡಲಾಗಿದ್ದು, ಸ್ಥಳೀಯ ಕಾರಣಗಳಿಂದಾಗಿ ಕಾಮಗಾರಿ ಪೂರ್ಣಗೊಂಡಿಲ್ಲದ ಕಾರಣ ಉಲ್ಲೇಖ (2)ರಲ್ಲಿ ಕಾಲಾವಧಿ ವಿಸ್ತರನೆಯನ್ನು ನೀಡಲಾಗಿರುವುದು ಸರಿಯಷ್ಟೆ. ದಿನಾಂಕ: 27-05-2015 ರಂದು ತಮ್ಮ ಸಂಸ್ಥೆಯು ಹೆಚ್.ಡಿ.ಡಿ ಮುಖಾಂತರ ದೊಡ್ಡಬಳ್ಳಾಪುರ ರಸ್ತೆ , ಕೆಂಚ್ಚನಹಳ್ಳಿ ಕ್ರಾಸ್ ಮುಖಾಂತರ ಹಾರೋಹಳ್ಳಿಗೆ ಓ.ಎಫ್.ಸಿ ಅಳವಡಿಸುತ್ತಿರುವುದು ಕಂಡು ಬಂದಿರುತ್ತದೆ. ಯಲಹಂಕ ವ್ಯಾಪ್ತಿಗೆ ಒಳಪಡುವ ಚೌಡೇಶ್ವರಿ ವಾರ್ಡ್ ನಂ-02 ರಲ್ಲಿ ಓ.ಎಫ್.ಸಿ ಅಳವಡಿಸುತ್ತಿದ್ದು, ಅನುಮತಿ ಪತ್ರದಲ್ಲಿ ವಿಧಿಸಿರುವ ನಿಬಂಧನೆಗಳನ್ನು ಪಾಲಿಸದೆ ಕೆಲಸ ನಿರ್ವಹಿಸುತ್ತಿರುವುದು ಮೇಲ್ನೋಟಕ್ಕೆ ಸಾಭಿತಾಗಿರುತ್ತದೆ.

Received copy
4/6/15

ಕಾಮಗಾರಿ ಪ್ರಾರಂಭಿಸುವ ಮುನ್ನ ನಿಬಂಧನೆಗಳಂತೆ ಸಂಬಂಧಿತ ಸ್ಥಳೀಯ ವಾರ್ಡ್/ ಸಹಾಯಕ ಕಾರ್ಯಪಾಲಕ ಅಭಿಯಂತರರು/ ರಸ್ತೆ ಮೂಲಭೂತ ಸೌಕರ್ಯ ರವರಿಗೆ ಅಗತ್ಯವಾಗಿ ಕಾಮಗಾರಿ ಪ್ರಾರಂಭಿಸುವ ಕುರಿತು ಮಾಹಿತಿ ನೀಡಬೇಕಾಗಿದ್ದು, ಮುಖ್ಯ ಅಭಿಯಂತರರು (ಓ.ಎಫ್.ಸಿ) ರವರ ಕಛೇರಿಗೂ ಮಾಹಿತಿ ಒದಗಿಸಬೇಕಾಗಿರುತ್ತದೆ. ಆದರೆ ತಮ್ಮ ಸಂಸ್ಥೆಯು ಯಾವುದೇ ಷರತ್ತುಗಳನ್ನು ಪಾಲಿಸದೆ ಕಾಮಗಾರಿಗಳನ್ನು ಪ್ರಾರಂಭಿಸಿರುವ ಕಾರಣ ಮತ್ತು ಅಗತ್ಯ ಮುನ್ನೆಚ್ಚರಿಕೆ ಕ್ರಮಗಳಾದ Barricading, Sign Board ಮತ್ತು ದೂರವಾಣಿ ಸಂಖ್ಯೆಗಳನ್ನು ಸ್ಥಳದಲ್ಲಿ ಅಳವಡಿಸದ ಕಾರಣ ಉಲ್ಲೇಖ (3) ಮತ್ತು (4)ರಲ್ಲಿ ಜಂಟಿ ಆಯುಕ್ತರು (ಯಲಹಂಕ)ರವರು ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು (ಯಲಹಂಕ)ಉಪವಿಭಾಗ ರವರು ಒಟ್ಟು ರೂ 4,82,000/- ಗಳನ್ನು ದಂಡ ವಿಧಿಸಿ "ಆಯುಕ್ತರು ಬಿ.ಬಿ.ಎಂ.ಪಿ" ರವರ ಹೆಸರಿನಲ್ಲಿ ಭರಿಸಲು ಈಗಾಗಲೇ ಸೂಚಿಸಿರುತ್ತಾರೆ.

ಈ ಹಿನ್ನಲೆಯಲ್ಲಿ ತಮ್ಮ ಸಂಸ್ಥೆಯು ನಿಬಂಧನೆಗಳ ಸ್ಪಷ್ಟ ಉಲ್ಲಂಘನೆ ಮಾಡಿರುವುದು ಕಂಡು ಬಂದಿರುವ ಕಾರಣ ಹಾಗೂ ತಮ್ಮ ಸಂಸ್ಥಯು ಪಾಲಿಕೆಯೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆ (MOU) ಆರ್ಟಿಕಲ್ 10.5(e) ನ ಪ್ರಕಾರ Non compliance of procedure ಆಗಿರುತ್ತದೆ. ಸದರಿ ಪ್ರಕರಣವನ್ನು MOU ಆರ್ಟಿಕಲ್ 10.5(e) ನ ಅಡಿಯಲ್ಲಿ ನಮೂದಿಸಿರುವಂತೆ ಓ.ಎಫ್.ಸಿ ಅಳವಡಿಕೆ ಸಂದರ್ಭಗಳಲ್ಲಿ ಮೇಲುಸ್ತುವಾರಿ ವಹಿಸುವ ಸದರಿ ವಾರ್ಡ್‌ನ ಕಿರಿಯ/ಸಹಾಯಕ ಅಭಿಯಂತರರು ರವರ ತೀರ್ಮಾನವೇ ಅಂತಿಮವಾಗಿದ್ದು, ಸದರಿಯವರು ವಿಧಿಸಿರುವ ದಂಡ ಮೊತ್ತ ರೂ 4,82,000/- ಗಳನ್ನು ತಕ್ಷಣ ಪಾಲಿಕೆಗೆ ಪಾವತಿಸಲು ಸೂಚಿಸಲಾಗಿದೆ.

ಮೇಲೆ ಕಾಣಿಸಿದ ಎಲ್ಲಾ ಅಂಶಗಳಲ್ಲಿ ವಿವರಿಸಿರುವಂತೆ ತಮ್ಮ ಸಂಸ್ಥೆಯು ಅನುಮತಿ ಪತ್ರದಲ್ಲಿ ವಿಧಿಸಿರುವ ಷರತ್ತುಗಳನ್ನು ಸ್ಪಷ್ಟವಾಗಿ ಉಲ್ಲಂಘಿಸಿರುವುದು ಕಂಡು ಬಂದಿದ್ದು, ಈ ಬಗ್ಗೆ ಎಚ್ಚರಿಕೆ ವಹಿಸಲು ಸೂಚಿಸಲಾಗಿದ್ದು, ಅನುಮತಿ ಪತ್ರಗಳ ಷರತ್ತುಗಳನ್ನು ಪಾಲಿಸದೆ ಇದ್ದಲ್ಲಿ, ಒಡಂಬಡಿಕೆ (MOU) ಯಲ್ಲಿ ಅಳವಡಿಸಿರುವ ಕಲಂಗಳ ಅನ್ವಯ ಮುಂದಿನ ಕ್ರಮ ಜರುಗಿಸಲಾಗುವುದು ಎಂದು ತಿಳಿಯಪಡಿಸಲಾಗಿದೆ.

4/6/15

**ಕಾರ್ಯಪಾಲಕ ಅಭಿಯಂತರರು(ಓ.ಎಫ್.ಸಿ)**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

4/06/15 4/6/15

**ಪ್ರತಿಯನ್ನು:**

1. ಗೌರವಾನ್ವಿತ ಆಡಳಿತಾಧಿಕಾರಿಗಳು, ಬಿ.ಬಿ.ಎಂ.ಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಮಾನ್ಯ ಆಯುಕ್ತರುಬಿ.ಬಿ.ಎಂ.ಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
3. ಜಂಟಿ ಆಯುಕ್ತರು ಯಲಹಂಕ ವಲಯರವರ ಅವಗಾಹನೆಗೆ ಹಾಗೂ ಮಾಹಿತಿಗಾಗಿ ಸಲ್ಲಿಸಿದೆ.
4. ಕಾರ್ಯಪಾಲಕ /ಸಹಾಯಕ ಕಾರ್ಯಪಾಲಕ ಅಭಿಯಂತರರು ಯಲಹಂಕ ವಿಭಾಗರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
5. ಕಛೇರಿ ಪ್ರತಿ.